ಕರ್ನಾಟಕ ವಿಧಾನ ಪರಿಷತ್ತು

1]	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1341
2]	ಮಾನ್ಯ ಸದಸ್ಯರ ಹೆಸರು	:	ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3]	ಉತ್ತರಿಸುವ ದಿನಾಂಕ	:	23/09/2021
4]	ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮೈಸೂರು ನಗರದ ಬಂಡಿಪಾಳ್ಯದಲ್ಲಿ ಒಂದು ಪೊಲೀಸ್ ಠಾಣೆಯನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದೇ: ಉತ್ತನಹಳ್ಳಿ, ಲಲಿತಾದ್ರಿಪುರ, ಶ್ರೀನಿವಾಸನ್‌ನಗರ (ಪೊಲೀಸ್ ಲೇಔಟ್) ಶ್ರೀರಾಮಪುರ, ರಿಂಗ್ ರಸ್ತೆಯ ಅಕ್ಕಪಕ್ಕದಲ್ಲಿರುವ ಬಡಾವಣೆಗಳನ್ನು, ವಿಮಾನ ನಿಲ್ದಾಣವನ್ನು ಈ ಠಾಣೆಯ ವ್ಯಾಪ್ತಿಗೆ ಒಳಪಡಿಸಲು ಕ್ರಮ ಜರುಗಿಸಲಾಗುವುದೇ;	ಮೈಸೂರು ನಗರದ ಬಂಡಿಪಾಳ್ಯದಲ್ಲಿ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆ ಸದ್ಯ ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಮೈಸೂರು ನಗರದ ಬಂಡಿಪಾಳ್ಯ, ರಿಂಗ್ ರಸ್ತೆ, ಲಲಿತಮಹಲ್, ಲಲಿತಾದ್ರಿಪುರ ಮೊದಲಾದ ಹೊರವಲಯದ ನಿರ್ಜನ ಪ್ರದೇಶಗಳಲ್ಲಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಪೊಲೀಸ್ ಗಸ್ತನ್ನು ಹೆಚ್ಚಿಸಲು ಕ್ರಮ ಜರುಗಿಸಲಾಗುವುದೇ: ಈ ಹಿಂದೆ ಕಾರ್ಯಾಚರಣೆ ಮಾಡುತ್ತಿದ್ದ ಚಾಮುಂಡಿ ಗಸ್ತು ಪಡೆಯನ್ನು ಪುನ: ಆರಂಭಿಸಲು ಕ್ರಮ ಜರುಗಿಸಲಾಗುವುದೇ?	ಮೈಸೂರು ನಗರ ವ್ಯಾಪ್ತಿಯಲ್ಲಿರುವ ನಿರ್ಜನ ಪ್ರದೇಶಗಳನ್ನು ಗುರ್ತಿಸಿದ್ದು, ಪ್ರತಿ ಠಾಣೆಯ ಗರುಡಾ ವಾಹನಗಳು ಈ ನಿರ್ಜನ ಪ್ರದೇಶಗಳಲ್ಲಿ ಹೆಚ್ಚಿನ ಗಸ್ತನ್ನು ನಿರ್ವಹಿಸುತ್ತಿವೆ. ಹಾಲಿ ಮೈಸೂರು ನಗರದಲ್ಲಿ 20 ಸಂಖ್ಯೆಯ 112 ತುರ್ತು ಸ್ಪಂದನ ಸಹಾಯ ವ್ಯವಸ್ಥೆಯ ವಾಹನಗಳು (Emergency Response Service System) ಕಾರ್ಯ ನಿರ್ವಹಿಸುತ್ತಿದ್ದು, ಈ ವಾಹನಗಳು ಸಹ ನಿರ್ಜನ ಪ್ರದೇಶಗಳಲ್ಲಿ ಹೆಚ್ಚಿನ ಗಸ್ತನ್ನು ನಿರ್ವಹಿಸುತ್ತಿವೆ. ಈ ವ್ಯವಸ್ಥೆಗೆ ಸಮಸ್ಯೆಯಲ್ಲಿರುವ ಮಹಿಳೆ/ಪುರುಷರು ಕರೆ ಮಾಡಿದಲ್ಲಿ ಸ್ಥಳಕ್ಕೆ ತೆರಳಿ ಸಹಾಯ ಹಸ್ತ ನೀಡಲಾಗುತ್ತಿದೆ. ಅಲ್ಲದೇ ರಿಂಗ್ ರಸ್ತೆಗೆ 04 ಹೈವೇ ಪೆಟ್ರೋಲಿಂಗ್ ವಾಹನಗಳನ್ನು ನಿಯೋಜಿಸಿದ್ದು, ಈ ವಾಹನಗಳು ದಿನದ 24 ಗಂಟೆಯೂ ಸಹ ಪೆಟ್ರೋಲಿಂಗ್ ಕರ್ತವ್ಯ ನಿರ್ವಹಿಸುತ್ತಿವೆ. ಅಲ್ಲದೇ ಪ್ರತಿ ನಿತ್ಯವೂ 20 ವಾಹನಗಳು ಸಹಾ ರಾತ್ರಿ ಗಸ್ತಿನಲ್ಲಿ ತೊಡಗಿದ್ದು, ಇವು ನಗರದಾದ್ಯಂತ ನಿರ್ಜನ ಪ್ರದೇಶಗಳನ್ನು ಸೇರಿ ಗಸ್ತು ಮಾಡುತ್ತವೆ. ಮೈಸೂರು ನಗರದಲ್ಲಿ ಚಾಮುಂಡಿ ಗಸ್ತು ಪಡೆ ಎಂಬ ವಾಹನಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ. 2014ನೇ ಸಾಲಿನಲ್ಲಿ ಚಾಮುಂಡಿ ವನಿತಾ ಸಹಾಯವಾಣಿ ಎಂಬ 02 ವಿಶೇಷ ಗಸ್ತು ವಾಹನಗಳು ಕಾರ್ಯ ನಿರ್ವಹಿಸುತ್ತಿದ್ದು, ಹಾಲಿ ಈ ವಾಹನಗಳು ನಿರ್ವಹಿಸುತ್ತಿದ್ದ ಕರ್ತವ್ಯಗಳನ್ನು 20 ಸಂಖ್ಯೆಯ 112 ತುರ್ತು ಸ್ಪಂದನ ಸಹಾಯ ವ್ಯವಸ್ಥೆಯ ವಾಹನಗಳು (Emergency Response Service System) ನಿರ್ವಹಿಸುತ್ತಿವೆ. ಮೈಸೂರು ಜಿಲ್ಲಾ ಪೊಲೀಸ್ ಘಟಕದ ಮೈಸೂರು ದಕ್ಷಿಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪಿಐ, ಪಿಎಸ್‌ಐ ಮತ್ತು ಸಿಬ್ಬಂದಿಗಳು ಗಸ್ತು ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ.

ಸಂಖ್ಯೆ: ಹೆಚ್‌ಡಿ 150 ಪಿಓಪಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು.